# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1172** |
| ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | **18.03.2025** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕೇಂದ್ರ ಸರ್ಕಾರದ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಗೆ ರಾಜ್ಯ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು) | ಭಾರತ ಸರ್ಕಾರವು "ಆತ್ಮ ನಿರ್ಭರ ಭಾರತ" ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2021-22 ಸಾಲಿನಿಂದ "ಒಂದು ಜಿಲ್ಲೆ ಒಂದು ಉತ್ಪನ್ನ (One District One Product (ODOP))" ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವು "ಒಂದು ಜಿಲ್ಲೆ ಒಂದು ಉತ್ಪನ್ನ" ರಡಿ ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಸಾಂಪ್ರದಾಯಿಕ ಕೃಷಿಯೇತರ ಎಂ.ಎಸ್.ಎಂ.ಇ. ಉತ್ಪನ್ನಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಬ್ರಾಂಡಿಂಗ್ ನೆರವನ್ನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಸಂಸ್ಥೆ, ಕರ್ನಾ ಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಇತ್ಯಾದಿ ಸಂಸ್ಥೆಗಳು ಜಾರಿಗೊಳಿಸುತ್ತಿರುವ ಯೋಜನೆಗಳನ್ನು ಸಂಯೋಜನೆ (Convergence) ಗೊಳಿಸುವ ಮೂಲಕ ಸೌಲಭ್ಯ ಒದಗಿಸಲಾಗುತ್ತಿದೆ. |
| (ಆ) | ಈ ಯೋಜನೆಯ ಅನ್ವಯ ಎಷ್ಟು ಜಿಲ್ಲೆಗಳಲ್ಲಿ ಉತ್ಪನ್ನಗಳನ್ನು ಗುರುತಿಸಲಾಗಿದೆ; ಯಾವುವು; (ಜಿಲ್ಲಾವಾರು ವಿವರ ನೀಡುವುದು) | ಈ ಯೋಜನೆಯ ಅನ್ವಯ 31 ಜಿಲ್ಲೆಗಳಲ್ಲಿ ಉತ್ಪನ್ನಗಳನ್ನು ಗುರುತಿಸಲಾಗಿದೆ: ಜಿಲ್ಲಾವಾರು ವಿವರವನ್ನು **ಅನುಬಂಧ-1 ರಲ್ಲಿ** ಒದಗಿಸಲಾಗಿದೆ. |
| (ಇ) | ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರವು ಯಾವ ರೀತಿಯ ಪ್ರೋತ್ಸಾಹ ನೀಡುತ್ತದೆ? (ತೆರಿಗೆ ವಿನಾಯಿತಿ ಹಾಗೂ ಇತರ ರಿಯಾಯತಿಗಳ ಬಗ್ಗೆ ವಿವರ ನೀಡುವುದು) | ➢ ಈ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಹಾಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಂಯೋಜನೆಯೊಂದಿಗೆ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮಗಳು, ಹೊಸ ವಿನ್ಯಾಸ, ತರಬೇತಿ, ತಂತ್ರಜ್ಞಾನ ಅಳವಡಿಕೆ, ಜಾಗೃತಿ ಶಿಬಿರಗಳು, ಗುಣಮಟ್ಟ ಸುಧಾರಣೆ, ಉತ್ಪಾದನೆ ಹೆಚ್ಚಳ, Product Catalogue, ಉಡುಗೊರೆ, ಮಾರುಕಟ್ಟೆ ಸೌಲಭ್ಯ, ಇ-ಕಾಮರ್ಸ್, ಪಾರಂಪರಿಕ ಉತ್ಪನ್ನಗಳ ಕುಶಲಕರ್ಮಿಗಳಿಗೆ ಪ್ರೋತ್ಸಾಹ/ತರಬೇತಿ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>➢ ಎಲ್ಲಾ ಸಂಬಂಧಪಟ್ಟ ಇಲಾಖೆ/ನಿಗಮ/ ಮಂಡಳಿಗಳು ತಮ್ಮ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಸಂಯೋಜನೆ ಮಾಡಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

**ಸಿಐ 34 ಎಸ್ಎಸ್ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ -1

## ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಜಿಲ್ಲಾವಾರು ಉತ್ಪನ್ನಗಳ ಪಟ್ಟಿ

| ಕ್ರ.ಸಂ | ಜಿಲ್ಲೆ | ಉತ್ಪನ್ನ |
|---|---|---|
| 1 | ಉಡುಪಿ | ರತ್ನಗಳು ಮತ್ತು ಆಭರಣ ತಯಾರಿಕೆ |
| 2 | ಮೈಸೂರು | ರೋಸ್‌ವುಡ್ ಕೆತ್ತನೆ |
| 3 | ಬೀದರ್ | ಬಿದರಿ ಕಲೆ |
| 4 | ವಿಜಯಪುರ | ವ್ಯವಸಾಯ ಸಾಮಗ್ರಿಗಳು |
| 5 | ಬಾಗಲಕೋಟೆ | ಇಳಕಲ್ ಸೀರೆ |
| 6 | ದಾವಣಗೆರೆ | ಹತ್ತಿ ಆಧಾರಿತ Ginning ಮತ್ತು ಸಿದ್ಧ ಉಡುಪು ತಯಾರಿಕೆ |
| 7 | ತುಮಕೂರು | ತೆಂಗಿನ ನಾರಿನ ಕೈಗಾರಿಕೆಗಳು |
| 8 | ಹಾವೇರಿ | ಮಸಾಲೆ ಪದಾರ್ಥಗಳು |
| 9 | ಚಾಮರಾಜನಗರ | ಕಲ್ಲಿನ ಕೆತ್ತನೆ |
| 10 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ ರೇಷ್ಮೆ ಮತ್ತು ಕಚ್ಚಾ ರೇಷ್ಮೆ ಆಧಾರಿತ ಸೀರೆಗಳು |
| 11 | ಚಿತ್ರದುರ್ಗ | ಮೊಳಕಾಲ್ಮೂರು ಸೀರೆಗಳು |
| 12 | ಕೋಲಾರ | ಶಿವಾರಪಟ್ಟಣ ಕಲ್ಲು ಕೆತ್ತನೆ |
| 13 | ಬಳ್ಳಾರಿ | ಬಳ್ಳಾರಿ ಡೆನಿಮ್ ಜೀನ್ಸ್ |
| 14 | ಶಿವಮೊಗ್ಗ | ಸಿದ್ಧ ಉಡುಪು ತಯಾರಿಕೆ |
| 15 | ಕೊಡಗು | ಮನೆಯಲ್ಲಿ ತಯಾರಿಸಿದ ಚಾಕೋಲೇಟ್/ವೈನ್ಸ್ |
| 16 | ಉತ್ತರ ಕನ್ನಡ | ಆಯುರ್ವೇದ ಔಷಧ ಉತ್ಪನ್ನಗಳು |
| 17 | ಬೆಳಗಾವಿ | ಫೌಂಡ್ರಿ |
| 18 | ಹಾಸನ | ಜಕಾರ್ಡ್ ಬೆಡ್‌ಶೀಟ್ |
| 19 | ಬೆಂಗಳೂರು ಗ್ರಾಮಾಂತರ | ಸಿದ್ಧ ಉಡುಪು ತಯಾರಿಕೆ |
| 20 | ಧಾರವಾಡ | ವಾಲ್ವ್ ಉತ್ಪಾದನೆ |
| 21 | ರಾಮನಗರ | ಚನ್ನಪಟ್ಟಣ ಗೊಂಬೆ ತಯಾರಿಕೆ |
| 22 | ಯಾದಗಿರಿ | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 23 | ಚಿಕ್ಕಮಗಳೂರು | ಅಡಿಕೆ ಎಲೆ ಆಧಾರಿತ ಉತ್ಪನ್ನಗಳು (ತಟ್ಟೆ, ಲೋಟ ಇತ್ಯಾದಿ) |
| 24 | ಕಲಬುರಗಿ | ಶಹಾಬಾದ್ ಕಲ್ಲುಗಳು |
| 25 | ಕೊಪ್ಪಳ | ಕಿನ್ನಾಳ ಗೊಂಬೆ ತಯಾರಿಕೆ |
| 26 | ರಾಯಚೂರು | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 27 | ದಕ್ಷಿಣ ಕನ್ನಡ | ಜವಳಿ ಸಂಸ್ಕರಣೆ |
| 28 | ಬೆಂಗಳೂರು ನಗರ | ಕೈಮಗ್ಗ ಆಧಾರಿತ ರೇಷ್ಮೆ ಸೀರೆ |
| 29 | ಗದಗ | ಜವಳಿ |
| 30 | ಮಂಡ್ಯ | ಅಕ್ಕಿ ಆಧಾರಿತ ಉತ್ಪನ್ನಗಳು |
| 31 | ವಿಜಯನಗರ | ಸಂಡೂರು ಲಂಬಾಣಿ ಕಸೂತಿ |